# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ. ನಂ.1233-2016** **ಡಿ.ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಬಿ.ಎಸ್.ದಿನೇಶ್<br>ಲೇ.ಶಾಂತಪ್ಪ ಬಿ<br>46 ವರ್ಷ<br>ಪತ್ರಿಕಾ ಪ್ರಸರಣಾ ಪ್ರತಿನಿಧಿ<br>ಬಿಳಿಗೆರೆ ಗ್ರಾಮ ಮತ್ತು ಅಂಚೆ, ಮಡಿಕೇರಿ ಜಿಲ್ಲೆ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 11-04-2022. |

**ಮುಖ್ಯ ವಿಚಾರಣೆ: ಶ್ರೀ ಎಂ.ಕೆ.ಬಿ ವಕೀಲರಿಂದ:**

ನಾನು 2006 ರಿಂದ ಪತ್ರಿಕಾ ಮಾಧ್ಯಮದಲ್ಲಿ ಪ್ರಸರಣ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿದ್ದೇನೆ. ಪಿರ್ಯಾದಿ ನನಗೆ ಆತ್ಮಿಯರಾಗಿದ್ದರು. ಪಿರ್ಯಾದಿ ನಂಜನಗೂಡಿನಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಏಜೆಂಟ್ ಆಗಿದ್ದರು. ನಾನು ದಿ.09-11-2006 ರಲ್ಲ್ ಪಿರ್ಯಾದಿ ನನಗೆ ಬೆಂಗಳೂರಿನ ಸೂರ್ಯ ನಗರ ಹೌಸಿಂಗ್ ಬೋರ್ಡ್ ನಲ್ಲಿ ಒಂದು ನಿವೇಶನ ಕೊಡಿಸುವುದಾಗಿ ಹೇಳಿ, ಅರ್ಜಿಯನ್ನು ಕೂಡ ಅವರೇ ಭರ್ತಿ ಮಾಡಿ, ರೂ.1,050/- ಗಳಿಗೆ ಸದರಿ ಹೌಸಿಂಗ್ ಬೋರ್ಡ್ ಹೆಸರಿಗೆ ಡಿ.ಡಿ ಯನ್ನೂ ನಾನು ತೆಗೆದುಕೊಟ್ಟಿರುತ್ತೇನೆ. 2006 ರಿಂದ 2010 ರ ವರೆಗೂ ನನ್ನ ಹಾಗೂ ಪಿರ್ಯಾದಿಯ ಸ್ನೇಹ ಅತ್ಮಿಯವಾಗಿತ್ತು. ಆಗಲೂ ಕೂಡ ಪಿರ್ಯಾದಿ ನನಗೆ ಬೇಗನೆ ನಿವೇಶನ ಅಲಾಟ್ ಮಾಡಿಸಿಕೊಡುವುದಾಗಿ ಹೇಳುತ್ತಿದ್ದರು. ಅಕ್ಟೋಬರ್ 2010 ರಲ್ಲಿ ಪಿರ್ಯಾದಿ, ಹೌಸಿಂಗ್ ಬೋರ್ಡ್ ನಲ್ಲಿ ನಿವೇಶನಗಳು ಕೊನೆ ಹಂತದಲ್ಲಿ ಇದ್ದು ಇನ್ನೇನು ಅಲಾಟ್ ಆಗುತ್ತದೆ, ನಗದು ರೂಪದಲ್ಲಿ ಹಣವನ್ನು ಸದರಿ ಹೌಸಿಂಗ್ ಬೋರ್ಡ್ ನವರು ಪಡೆದುಕೊಳ್ಳುತ್ತಿಲ್ಲ ಆದ್ದರಿಂದ ನಿಮ್ಮ ಖಾತೆಯ ಒಂದು ಖಾಲಿ ಚೆಕ್ಕನ್ನು ಕಳುಹಿಸಿ ಕೊಡಿ ಎಂದು ಕೇಳಿದರು. ಅದಕ್ಕೆ ಒಪ್ಪಿ ನಾನು ನನ್ನ ಖಾಲಿ ಚೆಕ್ಕನ್ನು ತಂದು ಪಿರ್ಯಾದಿಗೆ ಸ್ವತಃ ನೀಡಿರುತ್ತೇನೆ. ಆ ಖಾಲಿ ಚೆಕ್ಕು ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಿಪಿ-1 ಆಗಿರುತ್ತದೆ.

2. ಜನವರಿ–2013 ರಲ್ಲಿ ನನ್ನ ಹೆಂಡತಿಯ ತಂದೆ ಅಂದರೆ ನನ್ನ ಮಾವನಾದ ಬಿ.ಎಸ್.ಚೆನ್ನಪ್ಪ ರವರಿಂದ ಪಿರ್ಯಾದಿ ರೂ.2,00,000/– ಸಾಲವಾಗಿ ಪಡೆದುಕೊಂಡಿರುತ್ತಾರೆ ಹಾಗೂ ಆ ಸಾಲವನ್ನು 6 ತಿಂಗಳಲ್ಲಿ ವಾಪಸ್ಸು ಕೊಡುವುದಾಗಿ ಹೇಳಿದ್ದರು ಆದರೆ ಹೇಳಿದಂತೆ ವಾಪಸ್ಸು ನೀಡಲಿಲ್ಲ. ಆ ಸಾಲದ ಬಾಬ್ತು ಪಿರ್ಯಾದಿ ನನ್ನ ಮಾವನವರ ಕೆನರಾ ಬ್ಯಾಂಕ್ ಅಕೌಂಟಿಗೆ ತಿಂಗಳಿಗೆ ರೂ.1,000/–, ರೂ.2,000/– ರಷ್ಟು ಹಣವನ್ನು 2015 ರ ವರೆಗೂ ಪಾವತಿ ಮಾಡಿರುತ್ತಾರೆ, ಹಾಗೇ ಒಟ್ಟು ರೂ.25,000/–ಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ.

3. ನಂತರ ನನಗೆ ನಿಪಿ–4 ರಂತೆ ನೋಟಿಸ್ ಖುದ್ದು ಜಾರಿಯಾಗಿರುತ್ತದೆ. ಸದರಿ ನೋಟಿಸ್ ಗೆ ನಾನು ನನ್ನ ವಕೀಲರ ಮೂಲಕ ಸೂಕ್ತ ಪ್ರತ್ಯುತ್ತರವನ್ನು ನೀಡಿರುತ್ತೇನೆ. ನಾನು ಪಿರ್ಯಾದಿಗೆ ನೀಡಿದ ಸಹಿ ಮಾಡಿದ ಖಾಲಿ ನಿಪಿ–1 ನ್ನು ಪಿರ್ಯಾದಿದಾರರೇ ಅವರ ಕೈ ಬರವಣಿಗೆಯಲ್ಲಿ ಹಣದ ಮೊತ್ತ ಹಾಗೂ ಇತರೆ ಒಕ್ಕಣಿಕೆಗಳನ್ನು ಬರೆದುಕೊಂಡಿರುತ್ತಾರೆ. ನಾನು ದಿ.31–08–2015 ರಲ್ಲಿ ಪಿರ್ಯಾದಿ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ದಿ.03–11–2015 ರಲ್ಲಿ ಮಡಿಕೇರಿ ನಗರ ಪೊಲೀಸ್ ಠಾಣೆಗೆ ಪಿರ್ಯಾದಿದಾರರು ಹಾಜರಾಗಿ ನನ್ನ ಮಾವನ ಸಾಲವನ್ನು ಮರುಪಾವತಿ ಮಾಡುವುದಾಗಿ ಹಾಗೂ ನಿಪಿ–1 ನ್ನು ನನಗೆ ವಾಪಸ್ಸು ಕೊಡುವುದಾಗಿ ಒಪ್ಪಿಕೊಂಡಿದ್ದರು. ಆದರೆ ಒಪ್ಪಿದಂತೆ ನಡೆದುಕೊಳ್ಳದೆ ಪಿರ್ಯಾದಿ ನಿಪಿ–1 ನ್ನು ದುರುಪಯೋಗಪಡಿಸಿಕೊಂಡು ನನ್ನ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ನಾನು ಪಿರ್ಯಾದಿನಲ್ಲಿ ಹೇಳಿರುವಂತೆ ಪಿರ್ಯಾದಿಯಿಂದ ರೂ.2,50,000/– ಗಳನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ಆದ್ದರಿಂದ ನಾನು ಪಿರ್ಯಾದಿಗೆ ಯಾವುದೇ ಹಣವನ್ನು ಮರುಪಾವತಿ ಮಾಡಲು ಭಾಧ್ಯನಲ್ಲಿ.

4.ದಿ.31–10–2013 ರಲ್ಲಿ ನನ್ನ ಸಿಂಡಿಕೇಟ್ ಬ್ಯಾಂಕ್‌ನ ಚೆಕ್ ನಂ.653447 ಕಳೆದು ಹೋದ ಬಗ್ಗೆ ಹಾಗೂ ಆ ಚೆಕ್ಕನ್ನು ಯಾರಾದರು ಬ್ಯಾಂಕಿಗೆ ಹಾಜರುಪಸಿಡಿದಾಗ ತಡೆಯಿಡಿಯುವಂತೆ ಕೋರಿ ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್, ಚರ್ಚ್ ಕಾಂಪ್ಲೇಕ್ಸ್ ಜಿ.ಟಿ ರಸ್ತೆ ಇವರಿಗೆ ಮನವಿ ಪತ್ರ ಸಲ್ಲಿಸಿಕೊಂಡಿದ್ದು ಅದನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ನನ್ನ ಮಾವನವರಾದ ಚೆನ್ನಪ್ಪ ರವರ ಕೆನರಾ ಬ್ಯಾಂಕ್ ಗೆ ಸೇರಿದ ದಿ.01–01–2010 ರಿಂದ 31–12–2014 ರ ವರೆಗಿನ ಬ್ಯಾಂಕ್ ಸ್ಟೇಟ್‌ಮೆಂಟ್ ನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–2 ಎಂದು ಗುರುತಿಸಲಾಯಿತು. ನಾನು ಪಿರ್ಯಾದಿ ವಿರುದ್ಧ ಸಲ್ಲಿಸಿದ ದೂರಿಗೆ ಮಡಿಕೇರಿ ಪಟ್ಟಣ ಠಾಣೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸುತ್ತಿದ್ದು

ಅವುಗಳನ್ನು ನಿಡಿ–3 ಮತ್ತು 4 ಎಂದು ಗುರುತಿಸಲಾಯಿತು. ನಾನು ಪಿರ್ಯಾದಿ ವಿರುದ್ಧ ಮಡಿಕೇರಿಯ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರೈವೇಟ್ ಕಂಪ್ಲೆಂಟ್ ದಾಖಲಿಸಿದ್ದು ಸದರಿ ಸಿ.ಸಿ.406–2019 ರ ನ್ಯಾಯಾಲಯದ ದಿನಂಪ್ರತಿ ಆದೇಶಪುಟಗಳ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ–5 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**